ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ: SSK/QA/Pre-Primary/2019-20 ದಿನಾಂಕ:20.05.2019

ಸುತ್ತೋಲೆ

ವಿಷಯ: ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸುವ ಕುರಿತು

ಉಲ್ಲೇಖ:
1. 2018–19 ನೇ ಸಾಲಿನ ಸರ್ಕಾರದ ಆಯವ್ಯಯ ಘೋಷಣೆ ಕಂಡಿಕೆ 52
2. ಸರ್ಕಾರದ ಆದೇಶ ಸಂಖ್ಯೆ: ಇಡಿ111 ಯೋಯೋಕ 2018, ಬೆಂಗಳೂರು, ದಿ:17–05–2019
3. ದಿನಾಂಕ: 15.03.2019ರಂದು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಆಂಗ್ಲ ಮಾಧ್ಯಮ ಶಾಲೆಗಳು, ಕರ್ನಾಟಕ ಪಬ್ಲಿಕ್ ಶಾಲೆಗಳು, ಹಾಗೂ ಪೂರ್ವ ಪ್ರಾಥಮಿಕ ಶಾಲೆಗಳ ಸ್ಥಾಪನೆ ಕುರಿತು ನಡೆದ ಸಭೆಯ ನಡವಳಿ.

****

ಮೇಲೆನ ಉಲ್ಲೇಖ(2)ರಲ್ಲಿ 2019–20 ನೇ ಸಾಲಿನಿಂದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾಯೋಗಿಕವಾಗಿ ಷರತ್ತುಗಳಿಗೊಳಪಟ್ಟು ಪ್ರಾರಂಭಿಸಲು ಸರಕಾರವು ಅನುಮತಿ ನೀಡಿರುತ್ತದೆ.

ಸದರಿ ಆದೇಶದಂತೆ ಪೂರ್ವ ಪ್ರಾಥಮಿಕ ತರಗತಿಗಳನ್ನು ರಾಜ್ಯದಲ್ಲಿ ಈಗಾಗಲೇ ಪ್ರಾರಂಭಿಸಿರುವ 176 ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಮತ್ತು 2019–20ನೇ ಸಾಲಿನಿಂದ ಪ್ರಾರಂಭಿಸಲಾಗುವ 100 ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳು ಸೇರಿದಂತೆ, ಒಟ್ಟು 276 ಕೆ.ಪಿ.ಎಸ್.ಗಳಲ್ಲಿ ಪ್ರಾರಂಭಿಸಲು ಈ ಕೆಳಗಿನ ವಿವರವಾದ ಸೂಚನೆಗಳನ್ನು ನೀಡಲಾಗಿದೆ:

1. 2019–20ನೇ ಸಾಲಿನಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಕೆಳಗೆ ನಮೂದಿಸಿದಂತೆ ಎಲ್ಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ದಿನಾಂಕ: 10–06–2019 ರಂದು ಪ್ರಾರಂಭಿಸುವುದು.
2. ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸುವ ಕುರಿತು ಸ್ಥಳೀಯ ಮಟ್ಟದಲ್ಲಿ ಪ್ರಚಾರವನ್ನು ಕೆ.ಪಿ.ಎಸ್.ಗಳ ಎಸ್.ಡಿ.ಎಂ.ಸಿ.ಯವರು ಮತ್ತು ಶಿಕ್ಷಕರು ಮಾಡುವುದು.
3. 2019–20ನೇ ಸಾಲಿನಲ್ಲಿ ಪೂರ್ವ ಪ್ರಾಥಮಿಕದ LKG ಯ ಒಂದು ವಿಭಾಗವನ್ನು ಮಾತ್ರ ಪ್ರಾರಂಭಿಸುವುದು, ಈ LKG ತರಗತಿಗೆ 3.5 ರಿಂದ 4.5 ವರ್ಷ ವಯೋಮಿತಿಯ ಮಕ್ಕಳನ್ನು ದಾಖಲುಮಾಡಿಕೊಳ್ಳುವುದು. ಈ ವಿಭಾಗ ಪ್ರಾರಂಭಿಸಲು 3.5 ರಿಂದ 4.5 ವಯೋಮಾನದ ಕನಿಷ್ಠ 20 ಮಕ್ಕಳು ಪ್ರವೇಶ ಪಡೆಯುವಂತಿರಬೇಕು ಹಾಗೂ ಗರಿಷ್ಠ 30 ಮಕ್ಕಳನ್ನು ಮಾತ್ರ ದಾಖಲಿಸುವುದು.
4. ಪೂರ್ವ ಪ್ರಾಥಮಿಕತರಗತಿಯನ್ನು ಪ್ರಾರಂಭಿಸುವ ಕೆ.ಪಿ.ಎಸ್. ಗಳಲ್ಲಿ ಒಂದು ಕೊಠಡಿಯನ್ನು ಗುರುತಿಸಿಕೊಳ್ಳುವುದು. ಪ್ರಸ್ತುತ ಕೆ.ಪಿ.ಎಸ್.ಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಗರಿಷ್ಠ ರೂ. 50000/– ಬಳಸಿ ಕೊಠಡಿ ಸಜ್ಜುಗೊಳಿಸುವುದು ಮತ್ತು ಅವಶ್ಯ ಸಾಧನ ಸಾಮಗ್ರಿ ನಿಯಮಾನುಸಾರ ಖರೀದಿಸುವುದು. ಕೊಠಡಿ ಸಜ್ಜುಗೊಳಿಸಲು ಈ ಮೊತ್ತದಲ್ಲಿ ರೂ. 10000.00 ಮಿತಿಯಲ್ಲಿ ಸ್ಥಳೀಯ ಚಿತ್ರಕಲಾ ಶಿಕ್ಷಕರನ್ನು/ ಚಿತ್ರಕಲಾ ಪರಿಣತರನ್ನು ಬಳಸಿಕೊಂಡು ಮಕ್ಕಳಿಗೆ ಆಕರ್ಷಕವಾದ ಚಿತ್ರಗಳ ರಚನೆ,

ಗೋಡೆಗುಂಟ ನೆಲ ಮಟ್ಟದಿಂದ 2 ಅಡಿಯವರೆಗೆ ಮಕ್ಕಳು ಬರೆಯಲು/ ಚಿತ್ರ ರಚಿಸಲು ಸಾಧ್ಯವಾಗುವಂತೆ ಗ್ರೀನ್ ಬೋರ್ಡ್/ಕರಿಹಲಗೆ ರಚನೆ ಮುಂತಾದ ಕಾರ್ಯಗಳನ್ನು ಮಾಡುವುದು. ಖರೀದಿಸಬೇಕಾದ ಸಾಧನ ಸಾಮಗ್ರಿಗಳ ಪಟ್ಟಿಯನ್ನು ಹಾಗೂ ಕೆಲವು ಕೊಠಡಿಯ ವಿನ್ಯಾಸದ ಕೆಲವು ಮಾದರಿ ಉದಾಹರಣೆಗಳನ್ನು ಕೂಡಲೇ ಒದಗಿಸಲಾಗುವುದು. ಹೊಸದಾಗಿ ಪ್ರಾರಂಭವಾಗುವ ಕೆ.ಪಿ.ಎಸ್.ಗಳಲ್ಲಿ ಈ ವೆಚ್ಚವನ್ನು ಕೆ.ಪಿ.ಎಸ್. ನ ಯಾವುದೇ ವಿಭಾಗದಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸುವುದು ಹಾಗೂ ನಂತರ ಕೆ.ಪಿ.ಎಸ್.ಗಳಿಗೆ 2019–20 ನೇ ಸಾಲಿಗೆ ಬಿಡುಗಡೆಯಾಗುವ ನಿರ್ವಹಣಾ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳುವುದು.

5. ಪ್ರತಿ ಪೂರ್ವ ಪ್ರಾಥಮಿಕ ತರಗತಿಗೆ ಒಬ್ಬ ಶಿಕ್ಷಕಿ/ಶಿಕ್ಷಕ ಮತ್ತು ಒಬ್ಬರು ಆಯಾರವರನ್ನು ಶಾಲಾ ಎಸ್.ಡಿ.ಎಂ.ಸಿ. ವತಿಯಿಂದ ತಾತ್ಕಾಲಿಕವಾಗಿ 10 ತಿಂಗಳುಗಳ ಅವಧಿಗೆ ನೇಮಕ ಮಾಡಿಕೊಳ್ಳುವುದು. ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿ/ಶಿಕ್ಷಕರಿಗೆ ಪ್ರಸ್ತುತ ಅತಿಥಿ ಶಿಕ್ಷಕರಿಗೆ ನೀಡುತ್ತಿರುವ ಸಂಭಾವನೆಯಂತೆಯೇ ಮಾಸಿಕ ರೂ 7500.00, ಮತ್ತು ಆಯಾ ಇವರಿಗೆ ಮಾಸಿಕ ರೂ 5000.00 ಸಂಭಾವನೆಯನ್ನು ನಿಗದಿಪಡಿಸಲಾಗಿದೆ.

ವೇತನ ಅನುದಾನವನ್ನು ಆಯಾ ಎಸ್.ಡಿ.ಎಂ.ಸಿ. ಗಳಿಗೆ ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಿಂದ ಬಿಡುಗಡೆ ಮಾಡಲಾಗುವುದು.

ಶಿಕ್ಷಕಿ/ಶಿಕ್ಷಕರನ್ನು ಮತ್ತು ಆಯಾರವರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಈ ಕೆಳಗಿನ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ:

1. **ಶಿಕ್ಷಕರು:** ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿ/ಶಿಕ್ಷಕ ಪದವಿ ಪೂರ್ವ ಶಿಕ್ಷಣದಲ್ಲಿ (PUC) ಕನಿಷ್ಠ 50% ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು ಮತ್ತು NCTE ಮಾನ್ಯತೆ ಪಡೆದ ಸಂಸ್ಥೆಯಿಂದ ಎರಡು ಅಥವಾ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಯ ಡಿಪ್ಲೋಮಾ ಇನ್ ನರ್ಸರಿ ಟೀಚರ್ಸ ಎಜ್ಯುಕೇಶನ್/ ಪ್ರೀ–ಸ್ಕೂಲ್ ಎಜ್ಯುಕೇಶನ್/ಅರ್ಲಿ ಚೈಲ್ಡಹುಡ್ ಎಜ್ಯುಕೇಶನ್ ಪ್ರೊಗ್ರಾಂ (ಡಿ.ಇ.ಸಿ.ಇಡಿ.) ಅಥವಾ ಬಿ.ಇಡಿ. (ನರ್ಸರಿ) ಅರ್ಹತೆ [Diploma in Nursery Teachers Education/Pre-School Education/Early Childhood Education Programme (D.E.C.Ed.) of duration of not less than two years, or B.Ed. (Nursery)] ಹೊಂದಿರಬೇಕು, ವಯಸ್ಸು 45 ವರ್ಷಕ್ಕಿಂತ ಕಡಿಮೆ ಇರಬೇಕು.

ಒಂದು ವೇಳೆ ಈ ಮೇಲಿನ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಪಡೆದ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಪಿ.ಯು.ಸಿ. ಯಲ್ಲಿ ಕನಿಷ್ಠ 50% ಅಂಕಗಳನ್ನು ಪಡೆಯುವದರ ಜೊತೆಗೆ NCTE ಮಾನ್ಯತೆ ಪಡೆದ ಸಂಸ್ಥೆಯಿಂದ ಡಿ.ಎಡ್. ತರಬೇತಿ ಹೊಂದಿರುವ 45 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳನ್ನು ಪರಿಗಣಿಸುವುದು.

2. **ಆಯಾ:** ಆಯಾಗಳ ಹುದ್ದೆಗೆ ಕನಿಷ್ಠ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. ಕಡ್ಡಾಯವಾಗಿ ಮಹಿಳೆಯಾಗಿರಬೇಕು, ವಯಸ್ಸು 45 ವರ್ಷಕ್ಕಿಂತ ಕಡಿಮೆ ಇರಬೇಕು ಮತ್ತು ಸ್ಥಳೀಯರಾಗಿರಬೇಕು (ಆಯಾ ಗ್ರಾಮ/ವಾರ್ಡ ವ್ಯಾಪ್ತಿಯವರು), ಒಂದು ವೇಳೆ ಸ್ಥಳೀಯವಾಗಿ ಯಾವುದೇ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಕೆ.ಪಿ.ಎಸ್. ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದವರನ್ನು/ಪಕ್ಕದ ವಾರ್ಡನವರನ್ನು ಪರಿಗಣಿಸಬೇಕು.)

6. **ಶಿಕ್ಷಕರ/ಆಯಾರ ಆಯ್ಕೆಯಲ್ಲಿ ಅನುಸರಿಸ ಬೇಕಾದ ಅಂಶಗಳು:**

a) ಶಿಕ್ಷಕರ/ಆಯಾರ ಆಯ್ಕೆ ಸಮಿತಿ :– ಕೆ.ಪಿ.ಎಸ್. ಗಳು ಇರುವ ವಲಯಗಳ ಕೆ.ಪಿ.ಎಸ್. ಪ್ರಾಂಶುಪಾಲರು (ಅಧ್ಯಕ್ಷರು), ಉಪ ಪ್ರಾಂಶುಪಾಲರು (ಸದಸ್ಯ ಕಾರ್ಯದರ್ಶಿ), ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕರು, ಪ್ರಾಥಮಿಕ ವಿಭಾಗದ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹಾಗೂ ಕೆ.ಪಿ.ಎಸ್.ನ ಒಬ್ಬ ಹಿರಿಯ ಸಹ ಶಿಕ್ಷಕಿ ಸದಸ್ಯರಾಗಿರುವುದು.

b) ಶಿಕ್ಷಕರ ಆಯ್ಕೆಗೆ ವಿವಿಧ ಅಂಶಗಳಿಗೆ ನೀಡಬೇಕಾದಮೌಲ್ಯ (Weightage):ಅರ್ಹ ಅಭ್ಯರ್ಥಿಗಳ ಪೈಕಿ ಈ ಕೆಳಗಿನ ಅಂಶಗಳಂತೆ ಅತೀ ಹೆಚ್ಚು ಒಟ್ಟು ಅಂಕ ಗಳಿಸಿದವರನ್ನು ಪರಿಗಣಿಸುವುದು.

ಕ್ರ. ಸಂ.	ವಿವರಗಳು			
	ಭಾಗ–A: ಶೈಕ್ಷಣಿಕ/ ವೃತ್ತಿಪರಅರ್ಹತೆ	**ಪಡೆದಒಟ್ಟು ಶೇಕಡಾ ಅಂಕಗಳು (ಸಂಚಿತAggregate)**	**ನೀಡ ಬೇಕಾದ ಅಂಕಗಳು**	**ಗರಿಷ್ಠ ಅಂಕಗಳು**
1	ಪದವಿ ಪೂರ್ವ	X %	32% (=ಪಿ.ಯು.ಸಿ. ಯಲ್ಲಿನ X* 32/ 100)	32
2	ಪೂರ್ವ ಪ್ರಾಥಮಿಕ ತರಬೇತಿ/ ಡಿ.ಎಡ್. ತರಬೇತಿ	Y %	35% (=ಪೂ.ಪ್ರಾ./ ಡಿಇಡಿ ಯಲ್ಲಿನ Y* 35/ 100)	35
	ಭಾಗ–B: ಸ್ಥಳೀಯ ಗ್ರಾಮದ ಅಭ್ಯರ್ಥಿ/ ಇತರ ಹತ್ತಿರದ ಗ್ರಾಮದ ಅಭ್ಯರ್ಥಿಗಳ Weightage ಅಂಕಗಳು	**ಅಂಶ**	**ನೀಡ ಬೇಕಾದ ಅಂಕಗಳು**	**ಗರಿಷ್ಠ ಅಂಕಗಳು**
1		ಸ್ಥಳೀಯ ಗ್ರಾಮದ/ವಾರ್ಡ ಅಭ್ಯರ್ಥಿ	3	3
2		ಇತರ ಹತ್ತಿರದ ಗ್ರಾಮದ/ ವಾರ್ಡ ಅಭ್ಯರ್ಥಿಗಳು	1	
	ಭಾಗ– C: ಪೂರ್ವ ಪ್ರಾಥಮಿಕ ತರಗತಿ ಬೋಧನಾ ಅನುಭವ	**ಅನುಭವ ವರ್ಷಗಳಲ್ಲಿ**	**ನೀಡ ಬೇಕಾದ ಅಂಕಗಳು**	**ಗರಿಷ್ಠ ಅಂಕಗಳು**
1		ಒಂದು ವರ್ಷದವರೆಗೆ	5	20
2		ಒಂದು ವರ್ಷದಿಂದ ಎರಡು ವರ್ಷದವರೆಗೆ	10	
3		ಎರಡು ವರ್ಷ ಮೇಲ್ಪಟ್ಟು	20	
	ಭಾಗ–D:ಪೂರ್ವ ಪ್ರಾಥಮಿಕ ತರಗತಿಗಳ ಬೋಧನಾ ಪ್ರಾವಿಣ್ಯತೆಗಳು/ಕೌಶಲಗಳು	**ಅಂಶ**	**ಅಂಶವಾರು ಗರಿಷ್ಠ ಅಂಕಗಳು**	**ಗರಿಷ್ಠ ಅಂಕಗಳು**
		ಮಕ್ಕಳೊಡನೆ	5	10

		ಸಂವಹನ/ಭಾಷಾ ಕೌಶಲಗಳು		
		ಮಕ್ಕಳ ಪದ್ಯಗಳು/Rhymes ಗಳನ್ನು ಪ್ರಾಸಬದ್ಧವಾಗಿ ಹಾಗೂ ಹಾವಭಾವದೊಡನೆ ಹಾಡುವ ಕೌಶಲ	3	
		ಮಕ್ಕಳಿಗೆ ಆಟ ಆಡಿಸುವ ಮತ್ತು ಮಕ್ಕಳೊಡನೆ ಆಟವಾಡುವ ಕೌಶಲ	2	
	ಒಟ್ಟು ಅಂಕ			100

c) ಆಯಾರ ಆಯ್ಕೆಗೆ ಸಂಭಂದಿಸಿದಂತೆ ಅರ್ಹ ಅಭ್ಯರ್ಥಿಗಳ ಪೈಕಿ:

ಕ್ರ.ಸಂ.	ವಿವರಗಳು			
	ಭಾಗ– A: ಶೈಕ್ಷಣಿಕ ಅರ್ಹತೆ	**ಪಡೆದ ಒಟ್ಟು ಶೇಕಡಾ ಅಂಕಗಳು**	**ನೀಡ ಬೇಕಾದ ಅಂಕಗಳು**	**ಗರಿಷ್ಠ ಅಂಕಗಳು**
1	ಎಸ್.ಎಸ್.ಎಲ್.ಸಿ	X %	70% (=ಎಸ್. ಎಸ್.ಎಲ್.ಸಿ. ಯಲ್ಲಿನ X* 70/ 100)	70
	ಭಾಗ– B: ಕಾರ್ಯದ ಅನುಭವ	**ಅನುಭವ ವರ್ಷಗಳಲ್ಲಿ**	**ನೀಡ ಬೇಕಾದ ಅಂಕಗಳು**	**ಗರಿಷ್ಠ ಅಂಕಗಳು**
		ಒಂದು ವರ್ಷದವರೆಗೆ	5	20
		ಒಂದು ವರ್ಷದಿಂದ ಎರಡು ವರ್ಷದವರೆಗೆ	10	
		ಎರಡು ವರ್ಷ ಮೇಲ್ಪಟ್ಟು	20	
	ಭಾಗ–C:ಕೆಲಸದ ಬಗೆಗಿನ ಮನೋಭಾವ/ಕೌಶಲಗಳು	**ಅಂಶ**	**ಅಂಶವಾರು ಗರಿಷ್ಠ ಅಂಕಗಳು**	**ಗರಿಷ್ಠ ಅಂಕಗಳು**
		ಮಕ್ಕಳೊಡನೆ ಸಂವಹನ ಸಾಮರ್ಥ್ಯ	5	10
		ಮಕ್ಕಳ ಶುಚಿತ್ವ/ ಆರೋಗ್ಯದ ಬಗೆಗಿನ ಅರಿವು ಮತ್ತು ಮನೋಭಾವಗಳು	5	
	ಒಟ್ಟು			100

d) ಶಿಕ್ಷಕರ ಮತ್ತು ಆಯಾರ ಆಯ್ಕೆ ಪಟ್ಟಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದನೆ ಪಡೆಯುವುದು: ಈ ಮೇಲಿನ ಮಾನದಂಡ ಗಳಂತೆ ಆಯ್ಕೆ ಮಾಡಿದ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅನುಮೋದನೆಗೆ ಸಲ್ಲಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಕೂಡಲೇ ಅನುಮೋದನೆ ನೀಡುವುದು/ ನ್ಯೂನ್ಯತೆಗಳಿದ್ದರೆ ಸಕಾರಣದೊಂದಿಗೆ ಪರೀಷ್ಕರಣೆಗೆ

ಸಲಹೆ ನೀಡುವುದು ಮತ್ತು ನಿಗದಿತ ಕಾಲಮಿತಿಯೊಳಗೆ ಪ್ರಕ್ರಿಯೆ ಪೂರ್ಣಗೊಳ್ಳುವಂತೆ ಕ್ರಮ ವಹಿಸುವುದು.

7. ಶಿಕ್ಷಕರ ಮತ್ತು ಆಯಾಗಳ ನೇಮಕಾತಿಕುರಿತು ವ್ಯಾಪಕ ಪ್ರಚಾರ ಮಾಡುವುದು.

8. ಶಿಕ್ಷಕರು ಮತ್ತು ಆಯಾರವರ ನೇಮಕಾತಿಯನ್ನು ದಿ: **29–05–2019** ರೊಳಗೆ ಮಾಡಿಕೊಂಡು ಪಟ್ಟಿಯನ್ನು ಈ ಕಚೇರಿಗೆ ಮತ್ತು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸುವುದು.

9. ಆಯ್ಕೆಯಾದ ಶಿಕ್ಷಕರು/ಆಯಾರವರು 10 ತಿಂಗಳುಗಳವರೆಗೆ ಮಾತ್ರ ನೇಮಕವಾಗಿರುವುರು, ಸದರಿಯವರು ಮುಂದಿನ ವರ್ಷಗಳಲ್ಲಿ ನೇಮಕಾತಿಗಾಗಿ ಪುನಃ ಅರ್ಜಿ ಸಲ್ಲಿಸಬೇಕಾಗುತ್ತದೆ.

10. ಪೂರ್ವ ಪ್ರಾಥಮಿಕ ತರಗತಿಗಳನ್ನು ಪೂರ್ವಾಹ್ನ 10.00 ರಿಂದ ಅಪರಾಹ್ನ 3.30ರ ವರೆಗೆ ನಡೆಸುವುದು.

11. ಪೂರ್ವಪ್ರಾಥಮಿಕ ತರಗತಿಗಳಲ್ಲಿ ಬಳಸಬೇಕಾದ ಪಠ್ಯಕ್ರಮ, ಬೋಧನೋಪಕರಣಗಳು ಮುಂತಾದವುಗಳನ್ನು ಕೂಡಲೇ ಶಾಲೆಗಳಿಗೆ ಒದಗಿಸಲಾಗುವುದು.

12. ಆಯ್ಕೆಯಾದ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗುವುದು.

13. ಪ್ರತಿ ಕೆ.ಪಿ.ಎಸ್. ನಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ಅನುಷ್ಠಾನದ ಸಮನ್ವಯಕ್ಕಾಗಿ (Coordiation) ಒಬ್ಬ ಸಹ ಶಿಕ್ಷಕರನ್ನು/ಉಪನ್ಯಾಸಕರನ್ನು ನೇಮಿಸುವುದು, ಇವರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ರಾಜ್ಯ ಕಚೇರಿಗೆ ಒದಗಿಸುವುದು.

14. ಪೂರ್ವ ಪ್ರಾಥಮಿಕ ವಿಭಾಗದ ಮಕ್ಕಳಿಗೆ ಅಂಗನವಾಡಿಗಳಲ್ಲಿ ನೀಡುವ ಆಹಾರಘಟಕ ವೆಚ್ಚದಂತೆ ಹಾಲು, ಉಪಾಹಾರ ಮತ್ತು ಊಟ ನೀಡುವುದು. ಈ ಕುರಿತು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳು, ಅಕ್ಷರದಾಸೋಹ, ಇವರು ಪ್ರಸ್ತಾವನೆಯನ್ನು ಸಹನಿರ್ದೇಶಕರು, ಮಧ್ಯಾಹ್ನ ಉಪಾಹಾರ ಯೋಜನೆ, ಬೆಂಗಳೂರು, ಇವರಿಗೆ ಸಲ್ಲಿಸಿ ಅವಶ್ಯ ಕ್ರಮವಹಿಸುವುದು.

15. ಉಪನಿರ್ದೇಶಕರು (ಆಡಳಿತ) ಇವರು ಕೆ.ಪಿ.ಎಸ್. ಗಳಲ್ಲಿ ಅಗತ್ಯ ಕೊಠಡಿ/ಮೂಲಭೂತ ಸೌಲಭ್ಯ ಒದಗಿಸುವುದು, ಶಿಕ್ಷಕರ/ಆಯಾರ ಆಯ್ಕೆ, ಮಕ್ಕಳ ದಾಖಲಾತಿ, ಉಪಾಹಾರ ಪೂರೈಕೆ ತರಗತಿಗಳ ನಿರ್ವಹಣೆ ಮುಂತಾದ ಎಲ್ಲ ಅಂಶಗಳ ಬಗ್ಗೆ ಸಂಪೂರ್ಣ ಉಸ್ತುವಾರಿ ವಹಿಸುವುದು.

16. ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇವರು ಈ ಕುರಿತು ಅವಶ್ಯ ನಿರ್ದೇಶನಗಳನ್ನು ಕೆ.ಪಿ.ಎಸ್. ಪ್ರಾಂಶುಪಾಲರಿಗೆ ನೀಡುವುದು.

17. ಉಪನಿರ್ದೇಶಕರು (ಅಭಿವೃದ್ಧಿ) ಇವರು, ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಬೋಧನಾ ಕಲಿಕಾ–ಪ್ರಕ್ರಿಯೆ, ಶಿಕ್ಷಕರ ತರಬೇತಿ, ಮಕ್ಕಳ ಪ್ರಗತಿ ಮುಂತಾದವುಗಳ ನಿರ್ವಹಣೆ ಮಾಡುವುದು. ಕೆ.ಪಿ.ಎಸ್. ನೋಡಲ್ ಅಧಿಕಾರಿಗಳ ಮೂಲಕ ಇವುಗಳ ಮೇಲ್ವಿಚಾರಣೆ ಹಾಗೂ ಶಾಲೆ ಹಂತದಲ್ಲಿಯೇ ಸ್ಥಳ ಮಟ್ಟದ ಬೆಂಬಲ (Onsite Support) ಒದಗಿಸುವುದು. ಬ್ಲಾಕ್ ಹಂತದಲ್ಲಿ ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಒಬ್ಬ ಸಂಪನ್ಮೂಲ ವ್ಯಕ್ತಿಯನ್ನು ಈ ಕಾರ್ಯಕ್ಕಾಗಿ ಗುರುತಿಸಿ ಮಾರ್ಗದರ್ಶನ ನೀಡುವುದು.
18. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲಿನ ಎಲ್ಲ ಅಂಶಗಳ ಉಸ್ತುವಾರಿಯನ್ನು ಅವರ ವ್ಯಾಪ್ತಿಯ ಕೆ.ಪಿ.ಎಸ್.ಗಳಲ್ಲಿ ನಿರ್ವಹಿಸುವುದು.
19. ರಾಜ್ಯ ಕಚೇರಿಯಲ್ಲಿ ಈ ಕುರಿತು ಸಂಪರ್ಕಿಸಬೇಕಾದ ಇ–ಮೇಲ್ ವಿಳಾಸ–ssakarquality@gmail.com, ಸಂಪರ್ಕಿಸಬೇಕಾದ ಅಧಿಕಾರಿಗಳು:– 1. ಶ್ರೀ ರಾಮಾಂಜನೇಯ, ಹಿರಿಯ ಕಾರ್ಯಕ್ರಮಾಧಿಕಾರಿಗಳು, ಮೋಬೈಲ್–9480695477, 2. ಶ್ರೀ ಬಸವರಾಜಪ್ಪ, ಕಾರ್ಯಕ್ರಮಾಧಿಕಾರಿಗಳು, ಮೋಬೈಲ್– 9448999317,

ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಗೂ ರಾಜ್ಯಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು.

ಇವರಿಗೆ :ಅಗತ್ಯಕ್ರಮಕ್ಕಾಗಿ

1. ರಾಜ್ಯದ ಎಲ್ಲ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ
2. ರಾಜ್ಯದ ಎಲ್ಲ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ/ ಉಪನಿರ್ದೇಶಕರು (ಅಬಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ
3. ರಾಜ್ಯದ ಎಲ್ಲ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ
4. ರಾಜ್ಯದ ಎಲ್ಲ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ
5. ರಾಜ್ಯದ ಎಲ್ಲ ಶಿಕ್ಷಣಾಧಿಕಾರಿಗಳು, ಅಕ್ಷರದಾಸೋಹ
6. ರಾಜ್ಯದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು
7. ಸಂಬಂಧಿಸಿದ ಕೆ.ಪಿ.ಎಸ್. ಮುಖ್ಯಸ್ಥರು

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು, ಇವರಿಗೆ ಗೌರವ ಪೂರ್ವಕ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ರಾಜ್ಯದಎಲ್ಲ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಮತ್ತು ಕಲ್ಬುರ್ಗಿ ಆಯುಕ್ತಾಲಯ
7. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು.
8. ನಿರ್ದೇಶಕರು ಪ್ರಾಥಮಿಕ ಮತ್ತು ಪ್ರೌಢ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ನಿರ್ದೇಶಕರು, ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಸಂಸ್ಥೆ(ಸಿಸ್ಲೆಪ್), ಧಾರವಾಡ
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಾಹಾರ ಯೋಜನೆ, ಬೆಂಗಳೂರು.